2002–03ರ ಸುಮಾರಿಗೆ ಈ ಜೀವನಚರಿತ್ರಕಾರ ರಾಮಮನೋಹರ ಲೋಹಿಯಾ ಕೃತಿಗಳ ಕನ್ನಡ ಭಾಷಾಂತರದ ಯೋಜನೆಗಾಗಿ ಬರ್ಲಿನ್ ಯೂನಿವರ್ಸಿಟಿಗೆ ಲೋಹಿಯಾ ಸಲ್ಲಿಸಿದ ಪಿಎಚ್.ಡಿ. ಥೀಸಿಸ್ ಹುಡುಕಿ ಕೊಡಲು ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರನ್ನು ಕೇಳಿಕೊಂಡ. ಎಂ.ಡಿ. ನಂಜುಂಡಸ್ವಾಮಿ ವಿಶ್ವ ರೈತ ಸಂಘಟನೆಗಾಗಿ ವಿದೇಶಗಳಿಗೆ ಭೇಟಿ ಕೊಡುತ್ತಿದ್ದ ಕಾಲ ಅದು. 'ಈ ಸಲ ಬರ್ಲಿನ್‌ಗೆ ಹೋದಾಗ ಲೋಹಿಯಾ ಪಿಎಚ್.ಡಿ. ಥೀಸಿಸ್ ಹುಡುಕಿ ತರುತ್ತೇನೆ' ಎಂದರು ನಂಜುಂಡಸ್ವಾಮಿ. ಅದು ಕೈಗೂಡಲಿಲ್ಲ.

ಮುಂದೆ 2009–12ರ ನಡುವೆ ಕನ್ನಡ ವಿದ್ವಾಂಸರಾದ ಪ್ರೊ. ವಿವೇಕ ರೈ ಜರ್ಮನಿಯ ವ್ಯೂರ್ತ್ಸ್‌ಬರ್ಗ್ ಯೂನಿವರ್ಸಿಟಿಯ ಇಂಡಾಲಜಿ ವಿಭಾಗದಲ್ಲಿ ಗೆಸ್ಟ್ ಪ್ರೊಫೆಸರ್ ಆಗಿದ್ದರು; ಆಗ ಅವರು ಇಂಡಾಲಜಿ ಪ್ರೊಫೆಸರ್ ಇಂಗೋಸ್ಟ್ರಾಹ್ ಜೊತೆಗೆ ಹುಂಬೋಲ್ಟ್ ವಿಶ್ವವಿದ್ಯಾಲಯಕ್ಕೆ ಹೋಗಿ ಲೋಹಿಯಾ ಥೀಸಿಸ್ಸಿನ ಬೆನ್ನು ಹತ್ತಿದರು. ಲೋಹಿಯಾಗೆ ಸಂಬಂಧಿಸಿದ ಫೈಲಿನಲ್ಲಿ ಸಂಶೋಧನೆಯ ಆರಂಭದಿಂದ ಹಿಡಿದು ಮೌಖಿಕ ಪರೀಕ್ಷೆಯ ಮೌಲ್ಯಮಾಪನದವರೆಗೂ ವಿವರಗಳು ದೊರೆತವು. ಜರ್ಮನ್ ಭಾಷೆಯಲ್ಲಿದ್ದ ವಿವರಗಳನ್ನು ಇಂಗೋಸ್ಟ್ರಾಹ್ ವಿವೇಕ ರೈ ಅವರಿಗೆ ಇಂಗ್ಲಿಷಿನಲ್ಲಿ ವಿವರಿಸಿದರು. ವಿವೇಕ ರೈ ಅದನ್ನು ಕನ್ನಡಕ್ಕೆ ಅನುವಾದಿಸಿಕೊಂಡರು. ಲೋಹಿಯಾರ ಥೀಸಿಸ್ಸಿಗೆ 'ಉತ್ತಮ', 'ಅತ್ಯುತ್ತಮ', 'ಗುಡ್ ಟು ವೆರಿಗುಡ್' ಮುಂತಾದ ಮೆಚ್ಚುಗೆಗಳು ಇಲ್ಲಿ ದಾಖಲಾಗಿವೆ. ಈ ವಿವರಗಳು ವಿವೇಕ ರೈ ಅವರ 'ಜರ್ಮನಿಯ ಒಳಗಿನಿಂದ' (ಆಕೃತಿ ಆಶಯ ಪಬ್ಲಿಕೇಶನ್ಸ್, ಮಂಗಳೂರು) ಪುಸ್ತಕದಲ್ಲಿವೆ. ಆದರೆ ಥೀಸಿಸ್ಸಿನ ಪ್ರತಿ ವಿವೇಕ ರೈ ಅವರಿಗೂ ದೊರೆಯಲಿಲ್ಲ.

ಲೋಹಿಯಾರ 'ಸಾಲ್ಟ್ ಲಾಸ್ ಇನ್ ಇಂಡಿಯಾ' ಎಂಬ ಮಹತ್ವದ ಮಹಾಪ್ರಬಂಧದ ಕಣ್ಮರೆಯ ಹಿನ್ನೆಲೆಯಲ್ಲಿ ದೊರೆತಿರುವ ಬಿಡಿಬಿಡಿ ವಿವರಗಳನ್ನು ಹೀಗೆ ಜೋಡಿಸಿ ನೋಡಬಹುದು:

1933ರಲ್ಲಿ ಬರ್ಲಿನ್ ಯೂನಿವರ್ಸಿಟಿಯಲ್ಲಿ ಪಿಎಚ್.ಡಿ. ಮೌಖಿಕ ಪರೀಕ್ಷೆ ಮುಗಿಸಿ ಮದರಾಸಿಗೆ ಬಂದಿಳಿದ ಲೋಹಿಯಾ ಬಳಿ ಅವರು ತೊಟ್ಟ ಬಟ್ಟೆ ಬಿಟ್ಟರೆ ಬೇರೇನೂ ಇರಲಿಲ್ಲ. ಕಾರಣ, ಹಡಗಿನಲ್ಲಿದ್ದ ಅವರ ಪುಸ್ತಕ, ಬಟ್ಟೆ, ಸಾಮಗ್ರಿಗಳೆಲ್ಲವೂ ಕಾಣೆಯಾಗಿದ್ದವು. ಅವರು ಜರ್ಮನಿಯಿಂದ ಬಂದಿದ್ದರಿಂದ ಅವರ ಎಲ್ಲ ವಸ್ತುಗಳನ್ನೂ ಬ್ರಿಟಿಷ್ ಸರ್ಕಾರ ವಶಪಡಿಸಿಕೊಂಡಿತು ಎಂದು ಜೀವನಚರಿತ್ರೆಯೊಂದು ಹೇಳುತ್ತದೆ. ಆಗ ಹಡಗಿನಲ್ಲಿ ಕಾಣೆಯಾದ ಲೋಹಿಯಾರ ಎಲ್ಲ ಲಗೇಜಿನ ಜೊತೆಗೆ ಅವರ ಮಹಾಪ್ರಬಂಧದ ಪ್ರತಿಯೂ ಕಾಣೆಯಾಗಿರುವ ಸಾಧ್ಯತೆ ಇದೆ.

ಈ ಜೀವನಯಾನ ಬರೆಯುವ ಕಾಲಕ್ಕೆ ಮಸ್ತ್ರಾಂ ಕಪೂರ್ ಸಂಪಾದಿಸಿರುವ ಸಮಗ್ರ ಲೋಹಿಯಾ ಸಂಪುಟಗಳಲ್ಲಿ ದೊರೆತ ಲೋಹಿಯಾ ಮಹಾಪ್ರಬಂಧದ ಮೌಲ್ಯಮಾಪಕರ ಹೇಳಿಕೆಗಳನ್ನು ವಿವೇಕ ರೈ ಅವರ ಜರ್ಮನ್ ಗೆಳೆಯರು ಇಂಗ್ಲಿಷಿಗೆ ಅನುವಾದಿಸಿಕೊಟ್ಟರು. ಪ್ರೊಫೆಸರ್ ಶೂಮಾಕರ್ ಆರಂಭಿಸಿದ ಮೌಖಿಕ ಪರೀಕ್ಷೆಯ ಪ್ರಕ್ರಿಯೆಯಲ್ಲಿ, ಪ್ರೊಫೆಸರುಗಳಾದ ಓಂಕೆನ್, ಬರ್ನಾರ್ಡ್, ದೇಸಿಯೊರ್ ಕೊಟ್ಟಿರುವ ಮೌಲ್ಯಮಾಪಕರ ಸಹಿಗಳಿರುವ ಹೇಳಿಕೆಗಳಿವೆ; ಲೋಹಿಯಾ ಮಹಾಪ್ರಬಂಧ ಕುರಿತಂತೆ 'ಗುಡ್', 'ವೆರಿ ಗುಡ್', 'ಶ್ಲಾಘನಾರ್ಹ' ಎಂಬ ಅಭಿಪ್ರಾಯಗಳು ದಾಖಲಾಗಿವೆ.

ಎಲ್ಲ ಮೌಲ್ಯಮಾಪಕರೂ ಲೋಹಿಯಾ ಥೀಸಿಸ್ಸನ್ನು ಮೆಚ್ಚಿ, ಒಪ್ಪಿ, ಡಾಕ್ಟರೇಟ್ ಪದವಿಗಾಗಿ ಶಿಫಾರಸ್ಸು ಮಾಡಿದ್ದಾರೆ. ಪರೀಕ್ಷೆಯ ನಂತರ ಥೀಸಿಸ್ಸಿನ ಪ್ರತಿಯನ್ನು ಮೌಲ್ಯಮಾಪಕರಿಂದ ಸ್ವೀಕರಿಸಿದ ಲೋಹಿಯಾ ಅದೇ ತಿಂಗಳಲ್ಲಿ ಭಾರತಕ್ಕೆ ಹೊರಟು ಬಂದರು. 'ಹಿಟ್ಲರ್ ಕಾಲದಲ್ಲಿ ಜರ್ಮನಿಯಲ್ಲಿರುವುದು ಅಪಾಯಕರ' ಎಂದು ಶೂಮಾಕರ್ ಕೊಟ್ಟ ಎಚ್ಚರಿಕೆ ಕೂಡ ಲೋಹಿಯಾ ಅವಸರವಸರವಾಗಿ ಜರ್ಮನಿ ಬಿಡಲು ಕಾರಣವಾಗಿತ್ತು.

ಹೀಗೆ ಲೋಹಿಯಾ ಹೊರಡುವ ಮುನ್ನ, ಬರ್ಲಿನ್ ವಿಶ್ವವಿದ್ಯಾಲಯದ ನಿಯಮಗಳ ಪ್ರಕಾರ ಡಾಕ್ಟರೇಟ್ ಪದವಿಯ ಅಧಿಕೃತ ಘೋಷಣೆಯ ತಾಂತ್ರಿಕ ಅಗತ್ಯವಾಗಿದ್ದ ಸಂಶೋಧನಾ ಪ್ರಬಂಧದ 150 ಪ್ರತಿಗಳನ್ನು ಸಲ್ಲಿಸುವ ಕೆಲಸ ಆಗಿಲ್ಲ. ಆ ಸೂಚನೆ ಲೋಹಿಯಾಗೆ ತಲುಪಿತೋ ಇಲ್ಲವೋ ತಿಳಿದು ಬಂದಿಲ್ಲ. ಈ ಕುರಿತು ಹುಂಬೋಲ್ಟ್ ವಿಶ್ವವಿದ್ಯಾಲಯದ ಗ್ರಂಥಾಲಯ ಹಾಗೂ ಪತ್ರಾಗಾರಗಳಲ್ಲಿ ಹುಡುಕಿದ ವಿವೇಕ ರೈ ಅವರಿಗೂ ಈ ಕುರಿತ ಮಾಹಿತಿಗಳು ಸಿಕ್ಕಲಿಲ್ಲ. ಲೋಹಿಯಾ ಜರ್ಮನಿ ಬಿಟ್ಟ ನಂತರ ಅವರ ಸಂಶೋಧನೆಯ ಕಡತ ವಿಶ್ವವಿದ್ಯಾಲಯದಲ್ಲಿ ಸ್ಥಗಿತಗೊಂಡಂತಿದೆ. ಈ ಸಂಗತಿ ಮುಂದೆ ಲೋಹಿಯಾ 1965ರಲ್ಲಿ ಹುಂಬೋಲ್ಟ್ ವಿಶ್ವವಿದ್ಯಾಲಯಕ್ಕೆ ಭೇಟಿ ಕೊಟ್ಟಾಗಲೂ ಅವರ ಗಮನಕ್ಕೆ ಬಂದ ವಿವರಗಳಿಲ್ಲ.

ಆ ಕಾಲದ ಚರಿತ್ರೆಯ ಮತ್ತೊಂದು ದುರ್ಘಟನೆಯನ್ನೂ ಇಲ್ಲಿ ಗಮನಿಸಬಹುದು: ಲೋಹಿಯಾ ಜರ್ಮನಿ ಬಿಟ್ಟ ನಂತರ, 1933ರ ಮೇ ತಿಂಗಳ 10ರಂದು ನಾಝಿ ವಿದ್ಯಾರ್ಥಿಗಳು ನಾಝೀ ಪ್ರೊಫೆಸರುಗಳ ಜೊತೆಗೂಡಿ ಜರ್ಮನಿಯ ಮೂವತ್ತು ನಗರಗಳಲ್ಲಿ ಪುಸ್ತಕದ ಅಂಗಡಿಗಳು ಹಾಗೂ ವಿಶ್ವವಿದ್ಯಾಲಯಗಳ ಮೇಲೆ ದಾಳಿ ಮಾಡಿದರು; ಬರ್ಲಿನ್ ವಿಶ್ವವಿದ್ಯಾಲಯದ ಮೇಲೂ ದಾಳಿ ಮಾಡಿದರು. ಆರ್ಯನ್ ಜನಾಂಗಕ್ಕೆ ಸೇರಿರದ ಲೇಖಕ, ಲೇಖಕಿಯರ, ಹಾಗೂ ನಾಝಿ ಸಿದ್ಧಾಂತವನ್ನು ವಿರೋಧಿಸುವವರ ಸಾವಿರಾರು ಪುಸ್ತಕಗಳನ್ನು ಬೆಂಕಿಗೆಸೆದರು; 'ಜರ್ಮನೇತರ' ಬರಹಗಳನ್ನು ನಾಶ ಮಾಡಿ, 'ಜರ್ಮಾನಿಕ್' ಸಂಸ್ಕೃತಿಯನ್ನು 'ಶುದ್ಧಿ'ಗೊಳಿಸುವ ಕೆಲಸ ಮಾಡಿದರು.

ಚರಿತ್ರೆಯ ಈ ವಿವರಗಳನ್ನು ದಾಖಲಿಸುವ 'ಬ್ರಿಟಾನಿಯಾ ವಿಶ್ವಕೋಶ'ದ ಲೇಖಕರ ಕೊನೆ ಟಿಪ್ಪಣಿ:

'ಇದೆಲ್ಲ ನಡೆಯುವ ನೂರು ವರ್ಷಗಳ ಮೊದಲು ಹೆನ್ರಿಕ್ ಹೈನ್ ಎಂಬ ಯಹೂದಿ ಮೂಲದ ಕವಿ ಹೇಳಿದ್ದ: 'ಎಲ್ಲಿ ಪುಸ್ತಕಗಳನ್ನು ಸುಡುತ್ತಾರೋ ಅಲ್ಲಿ ಕೊನೆಗೆ ಮನುಷ್ಯರನ್ನು ಸುಡುತ್ತಾರೆ.' ನಾಝೀ ಜರ್ಮನಿಯಲ್ಲಿ ಯಹೂದಿಗಳ ಪುಸ್ತಕಗಳನ್ನು ಸುಡುವ ಕಾಲಕ್ಕೂ, ಜರ್ಮನಿಯ ಯಹೂದಿಗಳನ್ನು ಸುಡುವ ಕಾಲಕ್ಕೂ ಎಂಟು ವರ್ಷಗಳ ಅಂತರವಿತ್ತು.'

ಅವತ್ತು ನಾಝಿಗಳು ಸುಟ್ಟ ಪುಸ್ತಕಗಳಲ್ಲಿ ಕಮ್ಯುನಿಸ್ಟ್, ಸೋಷಲಿಸ್ಟ್, ಲಿಬರಲ್ ಪಂಥಗಳ ಪುಸ್ತಕಗಳಿದ್ದವು. ಆಲ್ಬರ್ಟ್ ಐನ್‌ಸ್ಟೈನ್, ಕಾರ್ಲ್ ಮಾರ್ಕ್ಸ್, ವಿಶೇಷ ಚೇತನರ ಹಕ್ಕುಗಳ ಹೋರಾಟಗಾರ್ತಿ–ಲೇಖಕಿ ಹೆಲೆನ್ ಕೆಲರ್, ನಾಟಕಕಾರ ಬರ್ಟೋಲ್ಟ್ ಬ್ರೆಕ್ಟ್ ಮೊದಲಾದವರ ಪುಸ್ತಕಗಳೂ ಸೇರಿದ್ದವು. ಜರ್ಮನಿಯ ಬರ್ಲಿನ್ ನಗರದ ಸ್ಟೇಟ್ ಅಪೇರಾ ಹೌಸ್ ಚೌಕದಲ್ಲಿ ಈ 'ಅನ್–ಜರ್ಮನ್' ಸ್ಪಿರಿಟ್ಟಿನ ಇಪ್ಪತ್ತೈದು ಸಾವಿರಕ್ಕೂ ಹೆಚ್ಚು ಪುಸ್ತಕಗಳನ್ನು ಸುಡುವ ಕಾರ್ಯಕ್ರಮ ಪ್ರಾಪಗ್ಯಾಂಡಾ ಮಂತ್ರಿ ಗೊಬೆಲ್ಸ್ ಅಧ್ಯಕ್ಷತೆಯಲ್ಲಿ ನಡೆಯಿತು.

1933ರಲ್ಲಿ ನಡೆದ ಇಂಥ ಹಲವು ಘಟನಾವಳಿಗಳ ನಡುವೆ ಲೋಹಿಯಾರ 'ಸಾಲ್ಟ್ ಲಾಸ್ ಇನ್ ಇಂಡಿಯಾ' ಥೀಸಿಸ್ಸಿನ ಪ್ರತಿ ಕಣ್ಮರೆಯಾದಂತಿದೆ; ಲೋಹಿಯಾರ ಗಂಭೀರ ಬೌದ್ಧಿಕ ಪಯಣದ ಆರಂಭ ಘಟ್ಟದ ಈ ಥೀಸಿಸ್ ವಸಾಹತು ವಿರೋಧಿ ಚಿಂತನೆಗೆ ಹಾಗೂ ನಿರ್ವಸಾಹತೀಕರಣ ಚಿಂತನೆಗೆ ನೀಡಬಹುದಾಗಿದ್ದ ಕೊಡುಗೆ ತಪ್ಪಿಹೋದ ವಿಷಾದ ನಮ್ಮಲ್ಲಿ ಹಾಗೇ ಉಳಿಯುತ್ತದೆ. ಆದರೂ ಆ ಸಂಶೋಧನೆಯ ಕಾಲದಲ್ಲಿ ಲೋಹಿಯಾ ಶೋಧಿಸಿದ ವಸಾಹತುಶಾಹಿ ಆರ್ಥಿಕತೆಯ ಒಳಸುಳಿಗಳು, ಯೋಜನೆಗಳು ಅವರ ಮುಂದಿನ ಚಿಂತನೆಗಳಲ್ಲಿ ಬೆಳೆದಿವೆ.

1965ರ ಅಮೆರಿಕ, ಜರ್ಮನಿ, ರಷ್ಯಾಗಳ ಪ್ರವಾಸದ ಕೊನೆಗೆ ಲೋಹಿಯಾ ಹೇಳಿದರು:

'ಅಮೆರಿಕದಲ್ಲಿ ಪ್ರೆಸಿಡೆಂಟ್ ಜಾನ್ಸನ್‌ಗೆ ಕೂಡ 'ಗೋ ಟು ಹೆಲ್' ಎಂದು ಹೇಳುವ ಸ್ವಾತಂತ್ರ್ಯ ನನಗಿತ್ತು; ಹಾಗೆ ಹೇಳುವಾಗ ಆನಂದವಿತ್ತು. ಈ ಆನಂದ ಪೂರ್ವಜರ್ಮನಿಯಲ್ಲಾಗಲೀ, ರಷ್ಯಾದಲ್ಲಾಗಲೀ ದೊರೆಯಲಿಲ್ಲ.'

* * *

ಆಗಸ್ಟ್ 1965. ಪಾಕಿಸ್ತಾನ ಸರ್ಕಾರವು ತರಬೇತಿ ಪಡೆದ ನುಸುಳುಕೋರರನ್ನು ಕಾಶ್ಮೀರ ಕಣಿವೆಗೆ ನುಸುಳಲು ಕಳುಹಿಸಿತು. ಭಾರತ–ಪಾಕಿಸ್ತಾನಗಳ ನಡುವೆ ಯುದ್ಧ ಶುರುವಾಯಿತು. ಬದಲಾದ ಸ್ಥಿತಿಯಲ್ಲಿ ಭಾರತ ಕಠಿಣ ನಿರ್ಣಾಯಕ ನಿಲುವು ತಳೆಯುವುದು ಅನಿವಾರ್ಯ ಎಂದು ಲೋಹಿಯಾಗೆ ಅನ್ನಿಸಿತು. ಪ್ರಧಾನಮಂತ್ರಿ ಶಾಸ್ತ್ರಿಯವರ ನಿಧಾನಗತಿಯನ್ನು ಲೋಹಿಯಾ ಲೋಕಸಭೆಯಲ್ಲಿ ಟೀಕಿಸಿದರು:

'ಮಾನ್ಯ ಪ್ರಧಾನಮಂತ್ರಿಗಳು ಏಕಕಾಲಕ್ಕೆ 'ಸಂತ' ಹಾಗೂ 'ದೇಶದ ಆಡಳಿತಗಾರ' ಎಂಬ ದ್ವಿಪಾತ್ರಾಭಿನಯದಲ್ಲಿ ತೊಡಗಿದ್ದಾರೆ. ಶಾಂತಿ,